# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮಿಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು-570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾ&ಪಾ ನಗರ ಉಪ ವಿಭಾಗ
ಮದ್ದೂರು-571428
ದೂರವಾಣಿ: 08232-232015,
ಮೊಬೈಲ್: 9448994845
ಫ್ಯಾಕ್ಸ್: 08232-233600
ಇ-ಮೇಲ್: aee_maddur@rediffmail.com

ಕ್ರಮಾಂಕ:ಸಕಾನಿಇಂ(ವಿ)/ಕಾ&ಪಾ,ನಉವಿ/ಮದ್ದೂರು-1/2017-18/ 2439-44 ದಿನಾಂಕ: 6-12-17
ಲಗತ್ತು:

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಉಪವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ:27.11.2017 ರಂದು ಜರುಗಿದ ನಗರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬಿಚಿಧಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ರವಿಶಂಕರ್ | ಅ ಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 2 | ಶ್ರೀ ರವಿಶಂಕರ್ | ಕಾ ನಿಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 3 | ಶ್ರೀ ನಾಗಭೂಷಣ್. | ಕಾ ನಿಇಂ(ವಿ) | ಮದ್ದೂರು ವಿಭಾಗ |
| 4 | ಶ್ರೀ ಜಿ.ಯು.ಮಂಜುನಾಥ್ | ಸ ಕಾಇಂ(ವಿ) | ಮದ್ದೂರು ನಗರ ಉಪವಿಭಾಗ |
| 5 | ಶ್ರೀ ಮಹೇಶ್ ಕುಮರ್ | ಹಿರಿಯ ಸಹಾಯಕ | ಮದ್ದೂರು ಉಪವಿಭಾಗ-1 |
| 6 | ಶ್ರೀ ಹೆಚ್.ಸಿ.ರಾಮಚಂದ್ರ | ಪ್ರ ಕಿಇಂ(ವಿ) | ಮದ್ದೂರು1&2 ಶಾಖೆ |
| 7 | ಶ್ರೀ ಆರ್.ಪ್ರಕಾಶ್ | ಪ್ರ ಕಿಇಂ(ವಿ) | ಗೆಜ್ಜಲಗೆರೆ ಶಾಖೆ |
| 8 | ಶ್ರೀ ರಾಜೇಶ್ | ಕಿ ಇಂ(ವಿ) | ಘಟಕ -2 ಕೆ.ಎಂ.ದೊಡ್ಡಿಶಾಖೆ |
| 9 | ಶ್ರೀ ಶಿವರಾಮು | ಕಿ ಇಂ(ವಿ) | ಘಟಕ -1 ಕೆ.ಎಂ.ದೊಡ್ಡಿಶಾಖೆ |

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕರು/ನೌಕರರುಗಳನ್ನು ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಯಿಸಿ ಉತ್ತರಿಸಲಾಯಿತು.

SEE (Elect) Works Circle CESC Mandya

ಅಧೀಕ್ಷಕ ಇಂಜಿನಿಯರ್ (ವಿ) 5986 ರಿಂದ ಸಂಖ್ಯೆ ದಿನಾಂಕ 10/12/17 ವೃತ್ತ ಕಛೇರಿ, ಮಂಡ್ಯ

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು –ಶ್ರೀ ರವೀಂದ್ರ, ಟೀಚರ್ಸ್ ಕಾಲೋನಿ ಮದ್ದೂರು | |
| 1 | ತಮ್ಮ ತಾತ್ಕಾಲಿಕ ಸ್ಥಾವರಸಂಖ್ಯೆ MTP-1880ರ ಬಾಕಿ ಮೊತ್ತವನ್ನು ಕುರಿತು ದೂರು ನೀಡಿರುತ್ತಾರೆ | ಸದರಿ ಬಿಲ್ಲಿನ ಬಗ್ಗ ಪ್ರತಿಕ್ರಿಯಿಸಿದ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ರವರು ಸಲಹೆ ನೀಡಿ, ತಾತ್ಕಾಲಿಕ ಸ್ಥಾವರದ ಬಾಕಿ ಮೊತ್ತವನ್ನು ಅದೇ ಗ್ರಾಹಕರ ಗೃಹಬಳಕೆ ಸ್ಥಾವರಕ್ಕೆ ವರ್ಗಾಹಿಸಿರುವುದು ನಿಯಮಾನುಸಾರವಾಗಿರುತ್ತದೆ. ಆದರೂ ಸಹ ಲೆಕ್ಕಾಧಿಕಾರಿ (ಅಂ.ಲೆ.ಪ)ರವರಿಗೆ ಈ ಬಗ್ಗೆ ವಿವರ ನೀಡಿ ಸಲಹೆ ಪಡೆದು ಗ್ರಾಹಕರಿಗೆ ತಿಳಿಸಲು ಸೂಚಿಸಲಾಯಿತು. ಮತ್ತು ಗ್ರಾಹಕರಿಗೆ ಸೂಚನೆ ನೀಡಿ ತಾತ್ಕಾಲಿಕ ಸ್ಥಾವರದ ಬಾಕಿಯನ್ನು ಆಂತರಿಕ ಪರಿಶೋಧನೆಯ ವರದಿ ಬಂದ ನಂತರ ಪಾವತಿಸುವಂತೆ ಹಾಗೂ ಗೃಹಬಳಕೆಯಲ್ಲಿ ಉಳಿಸಿಕೊಂಡಿರುವ ಉಳಿಕೆ ಮೊತ್ತವನ್ನು ಪಾವತಿಸಲು ಸೂಚಿಸಲಾಯಿತು. |
| | ಗ್ರಾಹಕರು– ಶ್ರೀ ಚಿಕ್ಕ ಮಾಯಿಗೌಡ, ದೊಡ್ಡರಸಿನಕೆರೆ | |
| 2 | ಗೃಹಬಳಕೆ ಸ್ಥಾವರದ ಬಿಲ್ಲಿನ ಲೋಪ ಆಗಿರುವ ಬಗ್ಗೆ ದೂರಿದರು | ದೂರಿಗೆ ಪ್ರತಿಕ್ರಿಯಿಸಿದ ಹಿರಿಯ ಸಹಾಯಕ ಕೆ.ಎಂ.ದೊಡ್ಡಿ ರವರು, ಗ್ರಾಹಕರು ವಿದ್ಯುತ್ ಸಂಪರ್ಕ ಮಂಜೂರಾತಿಯನ್ನು 120 ವ್ಯಾಟ್ಸ್ ಮಾತ್ರ ಪಡೆದಿದ್ದು, ನಿಯಮಾನುಸಾರ ಹೆಚ್ಚುವರಿ ಒತ್ತಡ ಉಪಯೋಗಿಸಿದ್ದು ಮಾಪಕದಲ್ಲಿ ದಾಖಲಾಗಿದ್ದರಿಂದ ಹೆಚ್ಚುವರಿ ಒತ್ತಡದ ದಂಡ  ಬಿಲ್ಲಿನಲ್ಲಿ ಸೇರ್ಪಡೆಯಾಗಿರುವ ಕುರಿತು ಮನವರಿಕೆ ಮಾಡಲಾಯಿತು ಹಾಗೂ ಹೆಚ್ಚುವರಿ ಒತ್ತಡವನ್ನು ಅಧಿಕ ಸಂಪರ್ಕ ಭಾರವನ್ನಾಗಿ ಪಡೆದುಕೊಳ್ಳಲು ತಿಳಿಸಲಾಯಿತು |
| | ಗ್ರಾಹಕರು– ಲಿಂಗಪ್ಪ ವಿ.ವಿ.ನಗರ ಮದ್ದೂರು | |
| 3 | ತಮ್ಮ ವಿವಿ ನಗರ ವ್ಯಾಪ್ತಿಯಲ್ಲಿ ವಿದ್ಯುತ್ ವೋಲ್ಟೇಜ್‌ನಲ್ಲಿ ವ್ಯತ್ಯಾಸವಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಕೋರಿದರು | ಸದರಿ ಸ್ಥಳದಲ್ಲಿ ಪರಿವರ್ತಕ ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿದ್ದು, ಇನ್ನೆರಡು ದಿನಗಳಲ್ಲಿ ಚಾಲನೆಯಾಗುವುದಾಗಿ ಕಿ.ಇಂ.(ವಿ) ವಿವರಿಸಿದರು |
| | ಗ್ರಾಹಕರು– ಶ್ರೀ ವಿ.ಕೆ.ತಿಮ್ಮೇಗೌಡ, ವಳಗೆರೆಹಳ್ಳಿ | |
| 4 | ತಮ್ಮ ಐಪಿ ಸ್ಥಾವರಕ್ಕೆ ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿದರು | ಇದಕ್ಕೆ ಪ್ರತಿಕ್ರಿಯಿಸಿದ ಸ.ಕಾ.ನಿಇಂ(ವಿ) ರವರು ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು |
| | ಗ್ರಾಹಕರು– ಶ್ರೀ ಶಂಕರ್ ವಳಗೆರೆಹಳ್ಳಿ | |
| 5 | ತಮ್ಮ ಗ್ರಾಮಕ್ಕೆ  ಹೆಚ್ಚುವರಿ ಪರಿವರ್ತಕ ಅಳವಡಿಸಲು ಕೋರಿದರು | ಸದರಿ ಅಂದಾಜು ಪಟ್ಟಿಯ ಮೊತ್ತವು ಹೆಚ್ಚಾಗಿರುವುದರಿಂದ ವೃತ್ತ ಕಚೇರಿಗೆ ಸಲ್ಲಿಸಲಾಗಿದ್ದು, ಅನುಮೋದನೆ ಪಡೆದು ಕಾಮಗಾರಿ ಕೈಗೊಳ್ಳಲಾಗುವುದೆಂದು, ಇಲ್ಲವಾದಲ್ಲಿ ತುರ್ತು ವಿದ್ಯುತ್ ಸಂಪರ್ಕ ಯೋಜನೆಯಡಿ ಇಲಾಖೆಯಿಂದ ಪರಿವರ್ತಕವನ್ನು ನೀಡಲಿದ್ದು, ಮಾರ್ಗದ ಕಾಮಗಾರಿಯನ್ನು ಸ್ವಯಂ ನಿರ್ವಹಣ ಯೋಜನೆಯಡಿ ಕೆಲಸ ನಿರ್ವಹಿಸಿಕೊಳ್ಳಲು ಸಲಹೆ ನೀಡಲಾಯಿತು |
| | ಗ್ರಾಹಕರು– ಶ್ರೀ ನಂಜೇಗೌಡ, ಬಿದರಹಳ್ಳಿ | |
| 6 | ಐಪಿ ಸ್ಥಾವರಗಳಿಗೆ ನಿಯಮಿತ ವಿದ್ಯುತ್ ಸರಬರಾಜು ನೀಡುವ ಬಗ್ಗೆ ದೂರಿದರು | ಸದರಿ ವಿಷಯಕ್ಕೆ ಪ್ರತಿಕ್ರಿಯಿಸಿ, ಕೆಪಿಟಿಸಿಎಲ್ ರವರು ಈ ಬಗ್ಗೆ ಸೂಕ್ತ ಮಾಹಿತಿ ನೀಡಲು ಹಾಗೂ ದೂರವಾಣಿ ಸ್ವೀಕರಿಸಿ ನಿಯಮಿತ ವೇಳೆಯಲ್ಲಿ ವಿದ್ಯುತ್ ನೀಡಲು ತಿಳಿಸಿದರು |
| | ಗ್ರಾಹಕರು – ಶ್ರೀ ಸುಧಾಮ ಹೌಸಿಂಗ್ ಬೋರ್ಡ್ ಚಾಮನಹಳ್ಳಿ | |
| 7 | ವಿದ್ಯುತ್ ಬಿಲ್ಲು ಅಧಿಕವಾಗಿ ಬಂದಿರುವ ಬಗ್ಗೆ ಪ್ರಶ್ನಿಸಿದರು | ಸದರಿ ಬಿಲ್ಲನ್ನು ಪರಿಶೀಲಿಸಲಾಗಿ ಕಳೆದ 34 ತಿಂಗಳಿನಿಂದ ರೀಡಿಂಗ್ ಕೊಡದೆ ಡೋರ್ ಲಾಕ್ ಆಗಿದ್ದು, ಒಂದೇ ಬಾರಿಗೆ ಬಿಲ್ ಬಂದಿರುವುದಾಗಿ ಸೂಕ್ತ ಸಮಜಾಯಿಷಿ ನೀಡಲಾಯಿತು |

| ಕ್ರ ಸಂ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| | ಗ್ರಾಹಕರು – ಶ್ರೀ ಕೃಷ್ಣಮೂರ್ತಿ ಉಪ್ಪಿನಕೆರೆ | |
| 8 | ತಮ್ಮ ಐಪಿ ಸ್ಥಾವರಕ್ಕೆ ಸಂಪರ್ಕ ಕೋರಿದ್ದು, ಕಾಮಗಾರಿ ಮಂಜೂರಾಗಿಲ್ಲವೆಂದು ಕೋರಿದರು | 2017ರ ಸಾಲಿನಲ್ಲಿ ಐಪಿ ಸ್ಥಾವರಗಳು ನೊಂದಣೆಯಾಗಿದ್ದು ಸೀನಿಯಾರಿಟಿ ಮೇರೆಗೆ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು |
| | ಗ್ರಾಹಕರು – ಶ್ರೀ ನಂಜೇಗೌಡ, ಬಿದರಹಳ್ಳಿ | |
| 9 | ಇಂಟರ್ ಮೀಡಿಯೇಟ್ ಕಂಬಗಳನ್ನು ಅಳವಡಿಸಬೇಕೆಂದು ಕೋರಿದರು | ಸದರಿ ವಿಷಯಕ್ಕೆ ಪ್ರತಿಕ್ರಿಯಿಸಿ ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು |
| | ಗ್ರಾಹಕರು – ಶ್ರೀ ಅವಿನಂದನ್, ವಳಗೆರೆಹಳ್ಳಿ | |
| 10 | ಗೆಜ್ಜಲಗೆರೆ ರಸ್ತೆಯಲ್ಲಿ 11 ಕೆ.ವಿ. ಮಾರ್ಗವನ್ನು ಅಳವಡಿಸಲು ಲಿಂಕ್‌ಲೈನ್ ಮಾಡಲು ಕೋರಿದರು | ಸದರಿ ಪ್ರಸ್ತಾವನೆಗೆ ಪ್ರತಿಕ್ರಿಯಿಸಿ, ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿ ತಯಾರಿಸಿ ಮಂಜೂರಾತಿಗೆ ಸಲ್ಲಿಸಲು ಕಿರಿಯ ಇಂಜಿನಿಯರ್(ವಿ)ರವರಿಗೆ ತಿಳಿಸಲಾಯಿತು |
| | ಗ್ರಾಹಕರು – ಶ್ರೀ ಶಿವಣ್ಣ, ಅಂಕನಾಥಪುರ | |
| 11 | ಹೆಬ್ಬೆರಳು ವ್ಯಾಪ್ತಿಯ ಐಪಿ ಸೆಟ್‌ಗಳಿಗೆ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಲು ನೀಡಲಾಗಿರುತ್ತದೆ. ಹೆಚ್ಚುವರಿ ಪರಿವರ್ತಕ ಅಳವಡಿಸಲು ಅನೇಕ ಬಾರಿ ಕೋರಿದ್ದರು | ಕೆಸ್ತೂರು ಶಾಖೆ ಕಿರಿಯ ಇಂಜಿನಿಯರ್(ವಿ)ರವರು ಅಂದಾಜು ಪಟ್ಟಿ ಸಲ್ಲಿಸದೇ ವಿಳಂಬ ಮಾಡಿರುವುದರ ಬಗ್ಗೆ ಮಾನ್ಯ ಅ.ಇಂ(ವಿ) ರವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ |
| | ಗ್ರಾಹಕರು – ಶ್ರೀ ರವಿಗೌಡ, ಉಪ್ಪಿನಕೆರೆ | |
| 12 | 1.ಕುಡಿಯುವ ನೀರಿಗೆ ಪ್ರತ್ಯೇಕ ಪರಿವರ್ತಕ ಅಳವಡಿಸುವ ಕುರಿತು ಕೋರಿದರು | ತಮ್ಮ ಪಂಚಾಯಿತಿ ವ್ಯಾಪ್ತಿಯಿಂದ ಅರ್ಜಿ ಸಲ್ಲಿಸಿದ್ದಲ್ಲಿ ತುರ್ತಾಗಿ ಕಾಮಗಾರಿ ಕೈಗೊಳ್ಳುವುದಾಗಿ ತಿಳಿಸಿದರು |
| | 2.ಸದರಿ ಗ್ರಾಮದಲ್ಲಿ ತಾಮ್ರದ ತಂತಿ ಬದಲಾವಣೆ ಬಗ್ಗೆ ಪ್ರಸ್ತಾಪಿಸಿದರು | ಇದಕ್ಕೆ ಪ್ರತಿಕ್ರಿಯಿಸಿ ಈ ಕಾಮಗಾರಿಯು ಮಂಜೂರಾಗಿದ್ದು ತುರ್ತಾಗಿ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು |
| | 3.ಫಾರಂ ಹೌಸ್ ವ್ಯಾಪ್ತಿಯಲ್ಲಿ ನಾಲ್ಕಾರು ಮನೆಗಳಲ್ಲಿ ಸದರಿ ಮನೆಗಳಿಗೆ ನಿರಂತರ ಜ್ಯೋತಿ ಯೋಜನೆಯ ಸಂಪರ್ಕ ಕೊಡಲು ಕೋರಿದರು | ಪಟ್ಟಣ ಠಾಣಾ ವ್ಯಾಪ್ತಿಯಲ್ಲಿರುವ ಮನೆಗಳಿಗೆ ನಿರಂತರ ಜ್ಯೋತಿ ಯೋಜನೆಯಡಿ ಸಂಪರ್ಕ ನೀಡಲು ನಿಯಮಾನುಸಾರ ಸಾಧ್ಯವಿಲ್ಲದ ಕಾರಣ, ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 1.30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ನಗರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.

ಮು.ಕ